ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-3 Issue 6, MAY-JUNE 2022, Pp. 34-42.**
**©*IIMRD*, Mysuru**

IIMRD JOURNALS

**www.iimrd.com**

# ಪಿ.ಲಂಕೇಶ್ ಅವರ ಕಾದಂಬರಿಗಳಲ್ಲಿ ಮಹಿಳಾ ಪ್ರತಿನಿಧೀಕರಣ

**ವಿದ್ಯಾ. ಟಿ. ಎನ್.** *

*ಸಂಶೋಧಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು ಮೈಸೂರು.

**ಸಾರಾಂಶ: (Abstract)**

*ಇಂಗ್ಲಿಷಿನ 'Representation' ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಪ್ರತಿನಿಧೀಕರಣ ಎಂಬ ಪದವನ್ನು ಬಳಸಲಾಗುತ್ತಿದೆ. ಪ್ರತಿನಿಧೀಕರಣವೆಂದರೆ "ಯಾವುದೇ ಘಟನೆ, ಲೋಕಾನುಭವ, ವ್ಯಕ್ತಿ ಅಥವ ಸಮುದಾಯವನ್ನು ಕುರಿತು ಬರವಣಿಗೆ ಮತ್ತು ಇನ್ನಿತರ ಮಾಧ್ಯಮಗಳನ್ನು ಬಳಸಿ ನಿರೂಪಿಸುವುದಾಗಿದೆ. ಹಾಗೆ ಗ್ರಹಿಸಿದ್ದನ್ನು ಪ್ರತಿನಿಧೀಕರಿಸುವಲ್ಲಿ ಆಯಾ ವ್ಯಕ್ತಿಗಳ ದೃಷ್ಠಿಕೋನ ಕೆಲಸ ಮಾಡುತ್ತದೆ". ಅಂದರೆ ನಮಗೆ ತಿಳಿಯುವುದೇನೆಂದರೆ, ಒಬ್ಬ ಪುರುಷ ಲೇಖಕ ಮಹಿಳೆಯನ್ನು ಸಾಹಿತ್ಯದಲ್ಲಿ ಪ್ರತಿನಿಧಿಸುವಂತಹ ರೀತಿಗೂ ಒಬ್ಬ ಮಹಿಳಾ ಲೇಖಕಿ ತನ್ನ ಸಾಹಿತ್ಯದಲ್ಲಿ ಮಹಿಳೆಯನ್ನು ಪ್ರತಿನಿಧಿಸುವ ರೀತಿಗೂ ವ್ಯತ್ಯಾವಿರುತ್ತದೆ ಎನ್ನುವಂತಹುದು. ಮುಖ್ಯವಾಗಿ ಲೇಖಕ/ಲೇಖಕಿಯರು ತಮ್ಮ ಕಾಲಮಾನದ ಸಾಂಸ್ಕೃತಿಕ ಒತ್ತಡಗಳ ಹಿನ್ನೆಲೆಯಲ್ಲಿ ಆಯಾಯ ಕಾಲಮಾನಕ್ಕೆ ತಕ್ಕಂತೆ ಸಾಹಿತ್ಯ ರಚಿಸಿರುವುದು ಕಂಡುಬರುತ್ತದೆ. ಅದಕ್ಕಿಂತ ಮುಖ್ಯವಾಗಿ ಅಧ್ಯಯನಕಾರ ಅಂದರೆ ಓದುಗ ಒಂದು ಸಾಹಿತ್ಯ ಕೃತಿಯನ್ನು ಅಧ್ಯಯನ ಮಾಡುವಾಗ ತನ್ನ ಇಚ್ಛಿತ ದೃಷ್ಟಿಕೋನಗಳ ಮೂಲಕ ಕೃತಿ ಪ್ರವೇಶ ಮಾಡಬಹುದಾಗಿರುತ್ತದೆ. ಇಲ್ಲಿ ಯಾವ ಓದು ಸರಿ ಅಥವಾ ಯಾವ ಓದು ತಪ್ಪು ಎಂದು ಹೇಳುವುದಕ್ಕಿಂತ ಪ್ರತಿನಿಧೀಕರಣವೆಂದು ಹೇಳುವುದೇ ಸೂಕ್ತವೆನಿಸುತ್ತದೆ. ಮಹಿಳೆಯನ್ನು ಸಮಾಜ ಹಿಂದಿನಿಂದಲೂ ದ್ವಿತೀಯ ದರ್ಜೆಯ ಪ್ರಜೆಯನ್ನಾಗಿ ಪರಿಗಣಿಸುತ್ತಾ ಬಂದಿದೆ. ಪುರುಷನ ಅವಲಂಬನೆಯಲ್ಲಿಯೇ ಮಹಿಳೆ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳಬೇಕು ಎಂದು ಹೇಳುತ್ತದೆ. ಪ್ರಸ್ತುತದಲ್ಲಿ ಇದು ಸ್ವಲ್ಪ ಬದಲಾಗುತ್ತಾ ಸಹ ಇರುವುದನ್ನು ಗಮನಿಸಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಪಿ. ಲಂಕೇಶ್‌ರವರ ಕಾದಂಬರಿಗಳಲ್ಲಿ ಕಂಡುಬರುವ ಮಹಿಳಾ ಪ್ರತಿನಿಧೀಕರಣವನ್ನು ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** ಪಿ. ಲಂಕೇಶ್, ಕಾದಂಬರಿ, ಕನ್ನಡ ಸಾಹಿತ್ಯ, ಮಹಿಳೆ, ಪ್ರತಿನಿಧೀಕರಣ.

**ಪೀಠಿಕೆ**

ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತೀಯ ಸಾಹಿತ್ಯವು ಪರಿವರ್ತನೆ, ವೈವಿಧ್ಯತೆಗಳನ್ನು ಪಡೆಯಿತು. ಭಾಷೆಯಲ್ಲಿ, ರೂಪಗಳಲ್ಲಿ ಹೊಸತನವನ್ನು ರೂಢಿಸಿಕೊಂಡಿತು. ಭಾರತದಲ್ಲಿ ಪ್ರಾರಂಭಗೊಂಡಿದ್ದ ಕ್ರೈಸ್ತಧರ್ಮ ಪ್ರಸಾರವು ಹೊಸ ಸಾಹಿತ್ಯಕ್ಕೆ ಸ್ಪೂರ್ತಿಯಾಯಿತು. ಇಂಗ್ಲಿಷ್ ಭಾಷೆ ಸಾಹಿತ್ಯ ಎಲ್ಲ ದೇಶೀ

*Please cite this article as:* ವಿದ್ಯಾ. ಟಿ.ಎನ್. (2022). ಪಿ.ಲಂಕೇಶ್ ಅವರ ಕಾದಂಬರಿಗಳಲ್ಲಿ ಮಹಿಳಾ ಪ್ರತಿನಿಧೀಕರಣ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(6). ಪು.ಸಂ.* 34–42.

ಭಾಷಾ ಸಾಹಿತ್ಯದ ಮೇಲೆ ತನ್ನ ಪ್ರಭಾವವನ್ನು ಬೀರಿತು. ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದಲೇ ಹೊಸಗನ್ನಡದ ಕಥೆ, ಕಾದಂಬರಿ, ನಾಟಕ, ಪ್ರಬಂಧ, ಭಾವಗೀತೆ, ಜೀವನಚರಿತ್ರೆ ಇತ್ಯಾದಿ ಪ್ರಕಾರಗಳು ಪ್ರಾರಂಭಗೊಂಡವು.

ಕನ್ನಡದಲ್ಲಿ ಕಾದಂಬರಿಯು 1875ರಿಂದ 1930ರವರೆಗಿನ ಕಾಲದಲ್ಲಿ ಪ್ರಾರಂಭಗೊಂಡಿತು. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಪ್ರೇರಣೆಗೊಂಡಿದ್ದರೂ ತಮ್ಮದೇ ಆದ ರೀತಿ–ನೀತಿಗಳನ್ನು ಬಿಡದೆ ಕಾದಂಬರಿಯ ಪ್ರಕಾರ ಪ್ರಾರಂಭವಾಯಿತು. ಆ ಕಾಲದ ಲೇಖಕರು ತಮ್ಮ ಧರ್ಮ ಹಾಗೂ ಸಂಸ್ಕೃತಿಯನ್ನು ನಂಬಿದವರೇ ಹೆಚ್ಚಾಗಿದ್ದರು. ಕರ್ನಾಟಕದಲ್ಲಿಯೂ ಸಹ ಸಾಹಿತ್ಯದಲ್ಲಿ ಅಭಿರುಚಿಯುಳ್ಳಂತಹ ಒಡೆಯರು ತಮ್ಮ ಆಸ್ಥಾನದಲ್ಲಿ ಕವಿಗಳಿಗೆ ಆಶ್ರಯವನ್ನು ಕೊಟ್ಟಿದ್ದರು. ಆಗಲೇ ಕೆಂಪು ನಾರಾಯಣ 'ಮುದ್ರಾಮಂಜೂಷ'ಎಂಬ ಗದ್ಯ ಕೃತಿಯನ್ನು ವಿಶಾಖದತ್ತನ 'ಮುದ್ರಾರಾಕ್ಷಸ' ಎಂಬ ನಾಟಕದ ಆಧಾರದ ಮೇಲೆ 1873ರಲ್ಲಿ ರಚಿಸಿದರು. ಇದರಲ್ಲಿ ಕಾದಂಬರಿಯ ರೂಪು–ರೇಷೆಗಳು ಹೆಚ್ಚಾಗಿಯೇ ಇರುವುದನ್ನು ಗುರುತಿಸಲಾಗಿದೆ.

ಮುದ್ದಣನನ್ನು ನಮ್ಮ ಕಾದಂಬರಿಕಾರರಿಗೆಲ್ಲ ಹಿರಿಯನೆಂದು ಹೇಳಬಹುದು. ಈತನ ರಾಮಾಶ್ವಮೇಧವು ಕಾದಂಬರಿಯ ರೀತಿಯಲ್ಲಿರುವ ಸಂಭಾಷಣೆಯನ್ನು ಒಳಗೊಂಡಿದೆ. 'ಗೋದಾವರಿ' ಎಂಬ ಕಾದಂಬರಿಯನ್ನು ಆಗಿನ ಕಾಲಕ್ಕೆ ತಕ್ಕ ವಸ್ತುವನ್ನು ಆರಿಸಿ ಬರೆದಿದಗದರೆಂದು ಹೇಳಬಹುದು. ಮುದ್ರಾಮಂಜೂಷಕ್ಕಿಂತಲೂ ರಾಮಾಶ್ವಮೇಧ ಗದ್ಯ ಸಾಹಿತ್ಯಕ್ಕೆ ತೀರ ಹತ್ತಿರವಾದ ಸಂಬಂಧವನ್ನು ಹೊಂದಿತ್ತು.

**'ಅಕ್ಕ' ಕಾದಂಬರಿ**

ಅಕ್ಕ ಕಾದಂಬರಿಯು ಪಿ. ಲಂಕೇಶ್‌ರವರ ಪ್ರಮುಖವಾದ ಕಾದಂಬರಿಯಾಗಿದೆ. ಸಾಮಾನ್ಯವಾಗಿ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯ ಸ್ವರೂಪಗಳು ಬೇರೆ–ಬೇರೆ ರೀತಿಗಳಲ್ಲೇ ವ್ಯಕ್ತವಾಗುತ್ತವೆ. ಈ ಕಾದಂಬರಿ ಸ್ತ್ರೀವಾದಿ ಶೋಧನೆಯ ಶ್ರೇಷ್ಠ ಕೃತಿಯಾಗಿದೆ. ಪ್ರತಿನಿಧೀಕರಣ ಎನ್ನುವ ಪರಿಕಲ್ಪನೆಯೇ 'Democratic' ಆಗಿರುವಂತಹದ್ದು, 'ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಸ್ತ್ರೀಯನ್ನು ದ್ವಿತೀಯ ದರ್ಜೆಯವಳು ಎಂದು ಪರಿಕಲ್ಪಿಸಿಕೊಂಡ ಕಾರಣ ಆ 'ಮೌಲ್ಯ' ದ ಪ್ರತೀಕಗಳು ಇನ್ನೂ ಬೇರೆ–ಬೇರೆ ರೂಪಗಳಲ್ಲಿ ಜೀವಂತವಾಗಿವೆ. ಜೀವಂತವಾಗಿರುವ ಆ ಪ್ರತೀಕಗಳೇ ಅಸಮಾನತೆಗೆ ಕಾರಣಗಳಾಗಿವೆ.

ಈ ಅಸಮಾನತೆಯ ನೆಲೆಗಳು ಸೃಜನಶೀಲ ಅಭಿವ್ಯಕ್ತಿಗಳಾದ ಕಾದಂಬರಿಗಳಲ್ಲಿಯೂ ವ್ಯಕ್ತಗೊಳ್ಳುತ್ತವೆ. ಅದಕ್ಕೆ ಸಾಕ್ಷಿಯಂತೆ ಪುರುಷಕೇಂದ್ರಿತ ನೆಲೆಯಲ್ಲಿ ಸ್ತ್ರೀ ಪಾತ್ರವು ಪ್ರಧಾನವಾದಂತಹ ಕಾದಂಬರಿ 'ಅಕ್ಕ' ಚಿತ್ರಿತವಾಗಿದೆ. ದೇವೀರಿಯಲ್ಲಿ ಬದುಕಿನ ಬಗೆಗೆ ಇರುವ ಅಸಹನೆ, ಹೊರಗಿನ ಶಕ್ತಿಗಳ ಅಧೀನದಲ್ಲಿರುವಾಗ, ಉಂಟಾಗುವ ತಳಮಳಗಳನ್ನು ಬೈಗುಳದ ಮೂಲಕ ಹೊರಹಾಕುತ್ತಾಳೆ. ಭ್ರಷ್ಟ ಸಮಾಜದಲ್ಲಿ ಬೇರೊಬ್ಬರ ನಿಯಂತ್ರಣದಲ್ಲಿ ಅನ್ಯರ ಸ್ವಾರ್ಥಕ್ಕೆ ದುಡಿಸಿಕೊಳ್ಳುವ ಹೆಣ್ಣಾಗಿ ದೇವೀರಿಯನ್ನು ಲಂಕೇಶರು ಪ್ರತಿನಿಧಿಸಿದ್ದಾರೆ ಕುಟುಂಬದ ಭವಿಷ್ಯ ನಿರ್ಮಾಣದಲ್ಲಿ ಸ್ತ್ರೀಯರುವಹಿಸುವ ಎಚ್ಚರ, ಮಾಡುವ ತ್ಯಾಗ, ಜೀವನೋತ್ಸಾಹ ಆಕೆ ಮಾನವೀಯ ಸಮಾಜದಲ್ಲಿ ಮನುಷ್ಯ ಸಂಬಂಧಗಳನ್ನು ಬೆಸೆಯುವ ಲೋಕವನ್ನು ಅನಾವರಣಗೊಳಿಸುತ್ತದೆ.

ಭ್ರಷ್ಟ ಸಮಾಜದಲ್ಲಿ ಬೇರೊಬ್ಬರ ಸ್ವಾರ್ಥಕ್ಕಾಗಿ ದುಡಿಸಿಕೊಳ್ಳುವ ಅಮಾನವೀಯ ಪ್ರಾಣಿಗಳಂತೆ ಇಲ್ಲಿಯ ಸ್ತ್ರೀ ಪಾತ್ರಗಳು ಗೋಚರಿಸುತ್ತವೆ.

ಲಂಕೇಶರ 'ಅವ್ವ' ಕವನದ ಅವ್ವನ ರೀತಿಯಲ್ಲಿ 'ಅಕ್ಕ' ಕಾದಂಬರಿಯಲ್ಲಿ ದೇವೀರಿ ತನ್ನ ಕುಟುಂಬ ರೂಪಿಸಿಕೊಳ್ಳಲು ಸಿಟ್ಟು ಬೈಗುಳಗಳನ್ನು ಪೋಷಣೆಯ ಅಸ್ತ್ರಗಳನ್ನಾಗಿರಿಸಿಕೊಂಡವಳು. ಖಡವ–ನಾಗ್ರರಿಗೆ ತನ್ನನ್ನು ಒಪ್ಪಿಸಿಕೊಳ್ಳದ ದೇವೀರಿ ಅವರ ಕೀಳು ಕಾಮನೆಯ ಕುಚೇಷ್ಟೆಗಳನ್ನು ಬೈಯುತ್ತಲೇ ಸೈರಿಸಿಕೊಳ್ಳುವ ಅನಿವಾರ್ಯ ಸ್ಥಿತಿಯಲ್ಲಿ ಬದುಕುತ್ತಿದ್ದಾಳೆ. ಒಣಕಲು ರೊಟ್ಟಿ ತಿಂದು, ಇಟ್ಟಿಗೆ ಹೊತ್ತು ಕೈಲಿದ್ದ ಒಡವೆಗಳನ್ನು ಕಳೆದುಕೊಂಡು, ರಾಮಪ್ಪನಂತಹ ರಾಜಕಾರಣಿಗಳನ್ನು ಕಾಡಿಬೇಡಿ ಕ್ಯಾತನ ಜೀವನ ರೂಪಿಸಲು ಬಹಳವಾಗಿ ಹೋರಾಡಿದವಳು. ದೇವೀರಿಯ ಜೀವನ ಕ್ರಮ ಅವಳಜೀವನ ವಿಧಾನ ಅಕ್ರಮವೇ, ಕ್ರಮವೇ, ಅವಳ ಹಣದ ಮೂಲವನ್ನಾಗಲೀ, ದುಡಿಮೆಯನ್ನಾಗಲೀ ಕಾದಂಬರಿ ಸ್ಪಷ್ಟವಾಗಿ ಎಲ್ಲಿಯೂ ಹೇಳುವುದಿಲ್ಲ. ಆದರೆ ಅವಳ ನಡವಳಿಕೆ, ಸಂಪಾದನೆ, ಜೀವನ ನಿರ್ವಹಣೆ, ಯಾವುದೋ ಅವ್ಯವಹಾರದ ಹಾದಿಯದ್ದಾಗಿರುವಂತೆ, ಯಾವುದೋ ಗುಪ್ತಜಾಲದ ನಿಯಂತ್ರಣದ್ದಾಗಿರುವಂತೆ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಒಳ್ಳೆಯ ಬದುಕಿನ ತುಡಿತ, ಬದುಕಲಾಗದ ಅಸಹಾಯಕತೆ ಎರಡೂ ಬಗೆಯ ಸ್ಥಿತಿಗತಿಗಳು ದೇವೀರಿಯಲ್ಲಿವೆ. ಪುರುಷ ಸಮಾಜದ ಕೈಗೊಂಬೆಯಂತಿರುವ ಆಕೆಯ ದುಡಿಮೆಯ ಲೋಕ ಅಸ್ಪಷ್ಟವಾಗಿರುವುದು ಅರಿವಾಗುತ್ತದೆ. ಕಾದಂರಿಯ ಕೊನೆಯಲ್ಲಿ ದೇವೀರಿಯು ತಮ್ಮನನ್ನು ಅಗಲಿ ಹೇಳದೆ ಕೇಳದೆ ಹೋಗಿಬಿಡುತ್ತಾಳೆ. ಅವಳಿರುವ ಸ್ಥಳ ಮತ್ತು ಸ್ಥಿತಿಗತಿಗಳು ಕಾದಂಬರಿಯಲ್ಲಿ ಅನಾವರಣಗೊಳ್ಳುವುದೇ ಇಲ್ಲ. ದೇವೀರಿ ತುಣುಕು ತುಣುಕಾಗಿ ಕಾದಂಬರಿಯಲ್ಲಿ ಕಾಣುತ್ತಾಳೆ. ಆದ್ದರಿಂದ ಆ ಪಾತ್ರಕ್ಕೆ ಸಮಗ್ರತೆ ಪ್ರಾಪ್ತವಾಗುವುದಿಲ್ಲ. ಇದು ಕಾದಂಬರಿಯ ರಚನಾತಂತ್ರಕ್ಕೆ ಸಂಬಂಧಪಟ್ಟಿದ್ದಾದರೂ ಅಕ್ಕನ ಪಾತ್ರ ಚಿತ್ರಣದಲ್ಲಿಯೂ ಮಹಿಳೆಯ ಪ್ರತಿನೀಧೀಕರಣ ಹೇಗೆ ಕೆಲಸ ಮಾಡಿದೆ ಎಂಬುದಕ್ಕೆ ನಿದರ್ಶನವಾಗುತ್ತದೆ.

ದೇವೀರಿ–ಕ್ಯಾತನ ಹಿತಾಸಕ್ತಿಯನ್ನು ಬಯಸುವವಳಾದರೂ ಆಕೆಯಿರುವ ಪರಿಸರ, ಪರಿಸ್ಥಿತಿ, ಅಸಹಾಯಕತೆ ಅವಳನ್ನು ಮನಃಕ್ಷೋಭೆಯಲ್ಲಿ ಮುಳುಗಿಸಿವೆ. ಹದಿನೈದು ವರ್ಷದ ದೇವೀರಿಯ ಬದುಕು, ಧೈರ್ಯ ಮತ್ತು ಆತ್ಮವಿಶ್ವಾಸದ ಕಥಾನಕವೆಂಬಂತಿದೆ. ಒಂಟಿಯಾಗಿದ್ದ ಹದಿಹರೆಯದ ಅನಾಥ ಬಡಹುಡುಗಿ ಅರಾಜಕತೆಯ ಬೀಡಾಗಿದ್ದ ಕೊಳಗೇರಿಯಲ್ಲಿ ಬದುಕುತ್ತಾ, ತಮ್ಮನನ್ನು ವಾತ್ಸಲ್ಯದಿಂದ ಬೆಳೆಸಿದ ಪರಿಯನ್ನು ಭಾವಾತಿರೇಕಕ್ಕೆ ಎಡೆಕೊಡದೆ ನಿರೂಪಿಸುವುದೇ ಕಾದಂಬರಿಯ ವಿಶೇಷತನ್ನ ತಮ್ಮನಿಗೆ ಊಟ, ಬಟ್ಟೆ, ಓದು–ಬರಹ, ಎಲ್ಲಾಒದಗಿಸಲು ಮತ್ತು ತನ್ನ ಬಾಳುವೆಯನ್ನು ಮುಂದುವರಿಸಲು ಅವಳಿಗೆ ನೆರವು ಯಾವ ದಿಕ್ಕಿನಿಂದಲೂ ಬರುವ ಸಾಧ್ಯತೆಯೇ ಇಲ್ಲದಿದ್ದಾಗ ಜಾಣ್ಮೆಯಿಂದ, ಧೈರ್ಯವಾಗಿ ತನ್ನೆದುರು ತೆರೆದುಕೊಂಡ ದಾರಿಯಲ್ಲಿ ಸಾಗುವುದು ಅವಳಿಗೆ ಅನಿವಾರ್ಯವಿತ್ತು. ತನ್ನ ಬದುಕಿನ ಸ್ಥಿತಿಯನ್ನು ಒಪ್ಪಿಕೊಂಡು ಅದನ್ನೇ ತನ್ನ ಬದುಕು ಕಟ್ಟಿಕೊಳ್ಳಲು ದಾರಿಮಾಡಿಕೊಂಡಿರುವ ದೇವೀರಿಯ ಜೀವನೋತ್ಸಾಹವನ್ನು ಮಾತ್ರ ಲಂಕೇಶರು ಮಹಿಳಾ ಪ್ರತಿನೀಧೀಕರಣವನ್ನು ಇಲ್ಲಿ ಕಡೆಗಣಿಸಿಲ್ಲ.

ಬದುಕನ್ನು ಸವಾಲಾಗಿ ತೆಗೆದುಕೊಂಡಿರುವ ಗಡಸುಗಾರ್ತಿ ಆಕೆ. ಎದುರಾಗುವಂತಹ ಸಮಸ್ಯೆಗಳನ್ನು ಅತ್ಯಂತ ದಿಟ್ಟತನದಿಂದ ಎದುರಿಸಬಲ್ಲವಳು.ಬಹುಶಃ ನಾಲ್ಕೈದು ವರ್ಷಗಳ ಕಾಲ ತಮ್ಮನನ್ನು ಅತ್ಯಂತ ಪ್ರೀತಿಯಿಂದಲೇ ಸಾಕಿ ಬೆಳೆಸಿದ ದೇವೀರಿ,ಒಂದು ದಿನ ಅವನನ್ನು ತ್ಯಜಿಸಿ,ತನ್ನ ದಾರಿ ಹಿಡಿದು ಹೋಗಲೇ

ಬೇಕಾಗುತ್ತದೆ.ಇದಕ್ಕೆ ಕಾರಣವೇನು? ಬಾಹ್ಯ ಒತ್ತಡಗಳೇ? ಕ್ಯಾತನ ಅಸಹನೆಯ ಮಾತುಗಳೇ? ಅಥವಾ ದೇವೀರಿಯೇ ತನ್ನ ಸ್ವಂತ ಬದುಕು ರೂಪಿಸಿಕೊಳ್ಳಲು ಕ್ಯಾತನನ್ನು ಬಿಡಲು ನಿರ್ಧರಿಸಿದಳೇ? ಇದಾವುದೂ ಕಾದಂಬರಿಯ ಕಥಾವಿವರಗಳ ಮೂಲಕ ಗೊತ್ತಾಗುವುದಿಲ್ಲ. ದೇವೀರಿ ಕ್ಯಾತನನ್ನು ಬಿಟ್ಟು ಹೋಗುವ ಕೊನೆಯ ಪ್ರಸಂಗ ಮಾತ್ರ ದಾರುಣವಾಗಿದೆ. ದೇವೀರಿಯ ಜೀವನ ವಿಧಾನದಲ್ಲಿ ಗೌರವವಾಗಿ ಬದುಕಲು ಸಾಧ್ಯವಾಗದ, ಬದುಕಿನ ವಿಚಿತ್ರ ಸಹಸಂಬಂಧ, ವೈವಿಧ್ಯ–ವೈರುಧ್ಯ, ಉನ್ನತಿ–ಅವನತಿಗಳ ವ್ಯಕ್ತಿತ್ವವು ಇವಳಲ್ಲಿ ಕಾಣುತ್ತೇವೆ. ದೇವೀರಿಯ ಜೀವನೋತ್ಸಾಹ,ಅವಳನ್ನು ಸ್ವಾರ್ಥಕ್ಕೊಳಗುಮಾಡಿಕೊಳ್ಳುವ ಸಮುದಾಯದ ಕೀಳುಕಾಮನೆಗಳು,ಸಂಶಯದ ಬದುಕಿನ ಅರೆಕೊರೆಗಳು ಇವೆಲ್ಲಾಸನ್ನಿವೇಶಗಳಲ್ಲಿ ಲಂಕೇಶರು ದೇವೀರಿಯನ್ನು ಪ್ರತಿನಿಧೀಸುವಲ್ಲಿ ಯಶಸ್ವಿಯಾಗಿದ್ದಾರೆ. ದೇವೀರಿಯಲ್ಲಿ ಒಳ್ಳೆಯ ಬದುಕಿನ ತುಡಿತ ಮತ್ತು ಬದುಕ ಲಾಗದ ಅಸಹಾಯಕತೆ ಎರಡೂ ಇವೆ.ಅಸಮಾನತೆಯ ವಿರುದ್ಧದ ಧ್ವನಿ ಸೂಕ್ಷ್ಮವಾಗಿ ದೇವೀರಿ ಪಾತ್ರದಲ್ಲಿ ಪ್ರತಿನಿಧಿಸಿದೆ. ಹಾದರ, ಅಪ್ರಮಾಣಿಕತೆ ಪ್ರತಿಯೊಂದು ಸನ್ನಿವೇಶದಲ್ಲಿ ದೇವೀರಿ ಪ್ರತಿನಿಧಿಸಿರುವುದನ್ನು ಇಲ್ಲಿ ಕಾಣುತ್ತೇವೆ.

ಸಿನಿಮಾ ಜಗತ್ತಿನ ಗೀಳಿಗೆ ಬಿದ್ದಿರುವ ಪದ್ದಿ (ಪದ್ಮ). ಹಲವಾರು ಶೋಷಣೆಗೆ,ವಂಚನೆಗೆ ಒಳಗಾಗುತ್ತಾಳೆ. ಸಿನಿಮಾದಲ್ಲಿ ಅವಕಾಶ ಪಡೆಯಬೇಕು, ತಾನು ನಾಯಕ ನಟಿ ಆಗಬೇಕು ಎಂದು ಮಹತ್ತರವಾದ ಆಸೆಯನ್ನಿಟ್ಟುಕೊಂಡಿದ್ದ ಪದ್ದಿ ಶಂಕ್ರನಾರಾಯಣನಂಥವರ ಲೈಂಗಿಕ ಶೋಷಣೆಗಳನ್ನು ಮೌನವಾಗಿ ಅನುಭವಿಸಬೇಕಾಗಿದೆ. ಪದ್ದಿಯ ಆಸೆಗಳು,ಅವಳ ದೌರ್ಬಲ್ಯ ಗಳನ್ನು ಚೆನ್ನಾಗಿ ಬಳಸಿಕೊಳ್ಳುತ್ತಿರುವವರ ವಿರುದ್ಧ ತಿರುಗಿ ಬೀಳುವಂತಹ ಧೈರ್ಯ, ಗಟ್ಟಿತನ, ಯಾವುದೂ ಪದ್ದಿಗಿರಲಿಲ್ಲ. ಶೂಟಿಂಗ್‌ನ ಹೆಸರಿನಲ್ಲಿ ಪ್ರತಿಬಾರಿಯೂ ಶೋಷಣೆಗೆ ಒಳಗಾಗುತ್ತಿದ್ದಳು. ಇಲ್ಲಿ ಬರುವಂತಹ ರಂಗಜೆಟ್ಟಿಯ ಹೆಂಡತಿ ಸಂಪೂರ್ಣಮ್ಮ ಕೊಳಗೇರಿಯ ಎಲ್ಲಾ ಹೆಂಗಸರಿಗಿಂತ ಒಳ್ಳೆಯವಳು, ಅವಳ ಮಗಳು ರೇಸ್ಮಿನೂ ಸಹ ತುಂಬಾ ಒಳ್ಳೆಯವಳು.ಊದಿನ ಕಡ್ಡಿಯ ತಗಡಿನ ಡಬ್ಬಿ ಮಾಡಿ ಜೀವನ ನಡೆಸುತ್ತಿದ್ದ ಇವರು ಪರೋಪಕಾರಿಗಳು. ಕ್ಯಾತ ಹಸಿದು ಬಂದಾಗ ಅವನಿಗೆ ತಿನ್ನಲು ಕೊಡುತ್ತಿದ್ದಳು.ತುಂಬಾ ಒಳ್ಳೆತನದ ಸಂಪೂರ್ಣಮ್ಮನಿಗೆ ಅವಳ ಒಳ್ಳೇತನವೇ ಕೆಟ್ಟದ್ದು ಮಾಡುತ್ತಿದೆ ಎನ್ನುವಂತೆ ಕಾದಂಬರಿಯಲ್ಲಿ ಪ್ರತಿನಿಧಿಸಿದ್ದಾಳೆ.

ಇಲ್ಲಿನ ಎಲ್ಲಾ ಮಹಿಳಾ ಪಾತ್ರಗಳು ನಿರ್ದಿಷ್ಟವಾದ ಪುರುಷ ವರ್ಗದ ಸುಖಹಿತವನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿತವಾಗುವಂತೆ ಸರಕುಗಳಂತೆ ಗೋಚರವಾಗುತ್ತವೆ. ಹಲವಾರು ಅನರ್ಥಗಳಿಗೆ ಕಾರಣವಾಗುವ ವೃತ್ತಿಯಲ್ಲಿ ತೊಡಗುವ ದೇವೀರಿ, ಪದ್ದಿಯ ನೈಜ ಚಿತ್ರಣ ಕಾದಂಬರಿಯಲ್ಲಿ ಅಗೋಚರವಾಗಿದ್ದು ವಾಸ್ತವಕತೆಯ ಸತ್ಯತೆಯ ನೇರ ನುಡಿಗಳಷ್ಟೇ ಓದುಗರಿಗೆ ವಾಸ್ತವತೆ ಒದಗಿಸಲ್ಪಟ್ಟವು. ಮಹಿಳೆಯರ ಸಂವೇದನೆ, ದಮನಿತ ವರ್ಗದ ಹಸಿವು, ಅನಕ್ಷರತೆ, ಹೆಣ್ಣಿನ ಅಭಿವ್ಯಕ್ತಿಗಳೊಂದಿಗೆ ಹೊಸ ಸಾಂಸ್ಕೃತಿಕ ಲೋಕದ ಪರಿಚಯ ಲಂಕೇಶ್ ಅವರ ಸಾಹಿತ್ಯದಲ್ಲಿ ಇವೆ.ಸಾಂಪ್ರದಾಯಿಕ ಈ ವ್ಯವಸ್ಥೆಯಲ್ಲಿ ಜನ್ಮತಃ ಜಾತಿ ನಿರ್ಧಾರವಾಗುವಂತೆ ಸ್ತ್ರೀಸಂಬಂಧ ನಡಾವಳಿಗಳು ಜನನವಾಗಿದ್ದು, ನಿರ್ಬಂಧಿತ ನೆಲೆಗಳಲ್ಲಿ, ವ್ಯವಸ್ಥೆಗಳಲ್ಲಿ ನಲುಗುತ್ತಿದ್ದಾಳೆ. ಇವೆಲ್ಲಾಕ್ಕೂ ಹೊಸದಾದ ದೃಷ್ಟಿಕೋನದಲ್ಲಿ ನೋಡುವ ಸೃಜನಶೀಲತೆ, ಉಲ್ಲಂಘನೆ, ಕಂಪನ, ಕ್ರಮವೊಂದು ಇನ್ನೂ ಮೂಡಬೇಕಾಗಿದೆ. ದಿಕ್ಕುತಪ್ಪಿಸುವವರ ಬಗ್ಗೆ ಎಚ್ಚರಿಕೆ

ಅಗತ್ಯವಾಗಿದ್ದು ಶೋಷಣೆಗಾಗಿ ಆಕ್ರೋಶ, ಅನುಕಂಪ, ಆರ್ತತೆ, ಹೊಸಧ್ವನಿ ಅಗತ್ಯವೆಂದು ಅಭಿಪ್ರಾಯಿಸಿದ್ದಾರೆ.

**ಬಿರುಕು ಕಾದಂಬರಿ**

'ಬಿರುಕು' ಒಂದು ರೀತಿಯಲ್ಲಿ ನನ್ನ ಪ್ರಜ್ಞೆಯ ಮುಖ್ಯಭಾಗವೆಂದು ಲಂಕೇಶರು 1996ರಲ್ಲಿ ಪ್ರಕಟವಾದ ಎರಡನೆಯ ಆವೃತ್ತಿಯ ಬೆನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಕಾದಂಬರಿಯಲ್ಲಿ ಸ್ತ್ರೀ ಪಾತ್ರಗಳಿಗೆ ಪ್ರಮುಖ ಸ್ಥಾನವಿದ್ದು ವಿಶಿಷ್ಟ ವ್ಯಕ್ತಿತ್ವದ ಪಾತ್ರಗಳನ್ನು ಕಾಣಬಹುದಾಗಿದೆ. ಕಾದಂಬರಿಯಲ್ಲಿ ಪ್ರಮುಖವಾಗಿ –ಇಂದಿರಾ, ಶಾಂತ, ಶಾಂತಾಳ ತಾಯಿ, ಬಸವರಾಜನ ತಾಯಿ, ಸುವರ್ಣ ಮುಂತಾದ ಪಾತ್ರಗಳು ಗೋಚರಿಸುತ್ತವೆ.ಈ ಎಲ್ಲಾ ಪಾತ್ರಗಳು ಕಾದಂಬರಿಯ ನಾಯಕ ಬಸವರಾಜನ ಪಾತ್ರದೊಂದಿಗೆ ವಿಶಿಷ್ಟವಾಗಿ ಗುರುತಿಸಿಕೊಂಡಿವೆ.

ಬೆಂಗಳೂರು ನಗರದಲ್ಲಿರುವ ಬಸವರಾಜನಿಗೆ ಹಳ್ಳಿಯ ನೆನಪಿನೊಂದಿಗೆ ಬರುವ ಆತನ ತಾಯಿಯ ಚಿತ್ರಣ ಗಂಗಪ್ಪನ ಮಾತುಗಳ ಮೂಲಕ ವ್ಯಕ್ತವಾಗುವುದು ಈ ರೀತಿ "ಊರಿಂದ ಇವನ ತಾಯಿ ಬಂದಿತ್ತು.ನಾನು ಯಾವುದೋ ಹೆಂಗಸು ಬಂದಿದೆ ಅಂತ ಸುಮ್ನಿದ್ರೆ ಆ ಹೆಂಗಸೆ ಬಂದು ತಾನು ಈತನ ತಾಯಿ ಅಂತ ಹೇಳಿಕೊಳ್ತು, ಅವಳಿಗೆ ಕಾಯಿಲೆಯಾಗಿದ್ರೆ ಈತ ಮನೆಗೆ ಎರಡು ದಿನಕ್ಕೊಮ್ಮೆ ಏನು ಸಾರ್ ರೂಮಿಗೆ ಬರೋದು? ಆಕೆ ಹತ್ರ ಜಗಳ, ಆ ಹೆಂಗಸು ಎಂಥದೂ ನನಗೇನು ಗೊತ್ತು ಆಕೆ ಎಂತವಳಾದ್ರು ಹೆತ್ತ ಹೆಣ್ಣಲ್ಲವೆ ಶಿವಶಿವ ಈ ಮನುಷ್ಯ ಉಪಗೋಗಿಸುತ್ತಿದ್ದ ಮಾತು ನೋಡಿದ್ರೆ ಇವತ್ತಿಗೂ ಬಾಯಲ್ಲಿಟ್ಟ ತುತ್ತು ಹಿಂದಕ್ಕೆ ಬರುತ್ತೆ" ಎಂಬ ಚಿತ್ರಣದ ಮುಖೇನ ಆತನ ತಾಯಿಯ ಬಗ್ಗೆ ಕಾದಂಬರಿಯ ನಾಯಕ ರಂಗಯ್ಯನೊಂದಿಗೆ ಹೇಳಿಕೊಂಡ ಭಾವನೆಗಳಿಗೂ ವ್ಯತ್ಯಾಸಗಳಿವೆ. ಈ ರೀತಿ ತಾಯಿಯ ಚಿತ್ರಣ ಪ್ರತಿನಿಧಿತವಾಗಿದೆ.

'ಇಂದಿರಾಳನ್ನು ಇದ್ದಿಲಿನ ಚೂರು' ಎಂದು 'ಶಾಂತಳ ತಾಯಿಯನ್ನು ತಿಮಿಂಗಿಲ' ಎಂದೂ ಸುವರ್ಣಳನ್ನು 'ಸುವರ್ಣ ಎಂಬ ತಿಮಿಂಗಿಲ' ಎಂದು ಅನ್ವರ್ಥ ನಾಮದಿಂದ ಬಸವರಾಜ ಗುರುತಿಸುತ್ತಾನೆ. ಕಾದಂಬರಿಯಲ್ಲಿ ಪ್ರೌಢ ಮನಸ್ಥಿತಿಯ ಸ್ತ್ರೀ ಪಾತ್ರಗಳಿದ್ದು ಬಹುತೇಕ ಪಾತ್ರಗಳು ನಾಯಕ ಬಸವರಾಜನ ಮೇಲೆ ಸವಾರಿ ಮಾಡುವ, ಆತನನ್ನು ಆಪೇಕ್ಷಿಸುವ ಪಾತ್ರಗಳಾಗಿವೆ. ರಂಗಯ್ಯನ ಹೆಂಡತಿ ಟ್ಯಾಕ್ಸಿಯಲ್ಲಿ ಹೋಗುವಾಗ ಇವನ್ನು ಪಡೆಯುವ ಹವಣಿಕೆ ತೋರುತ್ತಾಳೆ. ಮನೆಯಲ್ಲಿ ಕೂಡ ಆತನ ಮೇಲೆ ಆಕ್ರಮಣ ಮಾಡುತ್ತಾಳೆ. ಪ್ರೊ.ರಂಗಯ್ಯನ ಮಗಳು ಶಾಂತಾ ಕಾದಂಬರಿಯಲ್ಲಿ ಬರುವ ಪ್ರಮುಖ ಪಾತ್ರವಾಗಿದೆ.

ಈ ಶಾಂತಾ ಆಧುನಿಕ ಸಮಾಜಕ್ಕೆ ಹೊಂದಿಕೊಂಡಿರುವ ಸುಶಿಕ್ಷಿತೆ, ವಸಂತನ ಪ್ರೇಯಸಿ ಹಾಗೆಯೆ ಬಸವರಾಜನೊಂದಿಗೆ ವಿಶ್ವಾಸಗಳಿಸಿರುವ ಶಾಂತಾ ಬಸವರಾಜನನ್ನು ರಂಗಯ್ಯನ ಶೈಕ್ಷಣಿಕ ವಾತಾವರಣ ಬಿಟ್ಟು ಸಿನಿಮಾಕ್ಕೆ ಹೋಗಿಬರಲು ಆಹ್ವಾನಿಸುತ್ತಾಳೆ. ತುಂಬಿದ ಯೌವನದಿಂದ ಸಹಜವಾಗಿಯೇ ಆಕರ್ಷಿತನಾಗಿ ಆಕೆಯ ಬಗ್ಗೆ ವರ್ಣನೆ ಮಾಡುತ್ತಾನೆ.ಶಾಂತಾಳ ಸ್ನೇಹಕ್ಕೆ ಹಾಗೂ ರಂಗಯ್ಯನಿಂದ ಬಿಡುಗಡೆಗೆ ಉತ್ಸುಕನಾಗುತ್ತಾನೆ.

ಶಾಂತಾ ವಸಂತನನ್ನು ಕಂಡು ಆತನ ಜೊತೆಗೆ ಹೋಗುವಾಗ ಬಸವರಾಜ ಲೋಕಾಭಿರಾಮವಾಗಿ ವಿನಮ್ರವಾಗಿ ಅವಳ ತಾಯಿಯ ಜೊತೆಗೆ ಮಾತಿಗಿಳಿಯುತ್ತಾನೆ. ಆಕೆ ನಡೆ ನುಡಿಗಳಲ್ಲಾದ

ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಆಕೆಯ ಮನಸ್ಥಿತಿಯನ್ನು ಬದಲಾಯಿಸಲು " ನಿಮ್ಮನ್ನು ನೋಡಿದಾಗಲೆಲ್ಲಾ ನನ್ನ ತಾಯಿಯ ನೆನಪಾಗುತ್ತದೆ.ನಾನು ಹಳ್ಳಿಯ ಹುಡುಗ, ನಿಮ್ಮ ಯಜಮಾನ್ರ ಬುದ್ಧಿವಾದ ಇಲ್ಲದಿದ್ದರೆ ಇಲ್ಲಿ ಹ್ಯಾಗೆ ನಡೆದಯಕೊಳ್ಳೋದು ಅನ್ನೋದು ಗೊತ್ತಾಗ್ತಿರಲಿಲ್ಲ"ಎಂದು ವಿನಮ್ರವಾಗಿ ವರ್ತಿಸಿದಾಗ 'ಹಲ್ಲು ಗಿಂಜಬೇಡ ಗಾಂಭೀರ್ಯ ಇಲ್ಲವೇನಯ್ಯ? ಗಂಡಸಿನ ಥರ ವರ್ತಿಸು,ಯಾಕೆ ಹಾಗೆ ಕೋತಿ ಥರ ಹಲ್ಲು ಗಿಂಜ್ತೀಯ ?'ಎಂದು ಅಸಹನೆಯ ದಬ್ಬಾಳಿಕೆಯ ಒತ್ತಡ ಹೇರುತ್ತಾಳೆ.

ಕಾದಂಬರಿಯಲ್ಲಿ ಬಸವರಾಜನ ತಾಯಿ, ರಂಗಯ್ಯನ ತಾಯಿಯ ವಿಚಾರಗಳು ಭಾವನಾತ್ಮಕವಾಗಿ ಪ್ರತಿನಿಧಿಸಿವೆ.ಬಸವರಾಜನ ತಾಯಿ ಅನಾರೋಗ್ಯ ಪೀಡಿತಳಾಗಿದ್ದು ಆಕೆಯ ಆ ಸ್ಥಿತಿಗೆ ಆತನ ಜನನ ಮತ್ತು ಬಡತನವೆ ಕಾರಣವೆಂದು ತಿಳಿಸುತ್ತಾನೆ. ಆಕೆಯ ಮೈಯಲ್ಲಿ ಸರಿಯಿಲ್ಲವೆಂದೂ, ಆಕೆಯ ಬಳಿ ತಾನಿದ್ದು ಆರೈಕೆ ಮಾಡಲಾಗುತ್ತಿಲ್ಲವೆಂದೂ ವಿಷಾದಿಸುತ್ತಾನೆ. " ನನ್ನ ಜೀವನದಲ್ಲಿ ಅದೊಂದೇ ದುಃಖ ಸಾರ್. ಅವಳಿಗೆ ಬೇಕಾದಾಗ ನಾನು ಹತ್ತಿರ ಇರೋಕಾಗಿಲ್ಲ. ಇಲ್ಲಿಗೇ ಬಂದುಬಿಡವ್ವ ಅಂದೆ ಅವಳಿಂದ ಇಲ್ಲಿ ಇರೋಕಾಗಲ್ಲ.ಬೇಸರ ಅಂತ ಚಡಪಡಿಸಿ ಅಳ್ತಿರ್ತಾಳೆ. ನಾನೇನು ಮಾಡ್ಲಿ ಹೇಳಿ ನನ್ನವ್ವನಿಗೆ ಊರು ಬೇಕು. ಅಲ್ಲಿಯ ಧೂಳು,ಅನ್ಯೋನ್ಯತೆ,ದನಕರು,ಹೊಲಗದ್ದೆ ಆಕೆಗೆ ಬೇಕು.

ನನಗೆ ಅಷ್ಟರಲ್ಲಿ ತೃಪ್ತಿ ಆಗೊಲ್ಲ. ಎಲಿಯಟ್ ಹೇಳೋ ಹಾಗೆ ಜಥಅಿಟಂಡಿಜ ಮಾಡೋಕೆ ನನಗಿಷ್ಟ. ಆದರೆ ಯಾವುದು ಹೆಚ್ಚು ಅಂತ ಹ್ಯಾಗೆ ಹೇಳೋದು.ಒಂದೊಂದು ಸಲ ನಾನು ಓದಿದ್ದೇ ತಪ್ಪು ಅನ್ಸುತ್ತೆ. ನನಗೆ ನನ್ನ ಭಾಷೆನೇ ಮರೆತುಹೋಗ್ತಿದೆ. ನನ್ನವ್ವ ನನಗಾಗಿ ಎಷ್ಟೋ ಕಷ್ಟಪಟ್ಟು ಅದೆಷ್ಟು ಸಲ ಯಾರ್ಯಾರನ್ನ ಬೇಡಿ ನಾನು ಓದೋಕೆ ಹಣ ಕಳಿಸಿದ್ಲೋ, ಇನ್ನೂ ನೆನಪಿದೆ, ನಾನು ಚಿಕ್ಕವನಿದ್ದಾಗ ವಿಪರೀತ ಜ್ವರ ಬಂದಿತ್ತು. ಊರಿಂದ ಹತ್ತು ಮೈಲಿ ಫಾಸಲೆಯಲ್ಲಿ ಯಾರೂ ಡಾಕ್ಟರೇ ಇರಲಿಲ್ಲ. ಮಳೆಯಲ್ಲಿ ಹರಕಲು ಕೊಡೆ ಹಿಡಿದುಕೊಂಡು ಶಿವಮೊಗ್ಗೆಗೆ ಹೋಗಿ ಎರಡು ಡೋಸ್ ಔಷಧಿ ತರ್ತಿದ್ಲು ನನ್ನವ್ವ.ನನಗೆ ಕಾಯಿಲೇನೇ ಇಲ್ಲ ಅಂತ ತೋರಿಸೋಕೆ ನಾನು ಓಡಾಡ್ತಿದ್ರೆ ನನ್ನನ್ನು ಹಿಡಿದು ತೊಡೆ ಮೇಲೆ ಹಾಕಿಕೊಂಡು ತಟ್ಟುತ್ತಾ ಮಲಗಿಸಿ ಮತ್ತೆ ಔಷಧಿಗೆ ಓಡ್ತಿದ್ಲು. ಇದನ್ನೆಲ್ಲ ನೆನೆದರೆ....."

ರಂಗಯ್ಯನ ಕಣ್ಣಲ್ಲಿ ನೀರು ಬಂತು. ನಾನು ದುಃಖ ತಡೆಯಲಾರದೆ ಹೊರಗೆ ನೋಡತೊಡಗಿದೆ. ಆತ ಅನ್ನುತ್ತಿದ್ದ: "ತಾಯಿಯಂತ ವಸ್ತು ಇನ್ನಿಲ್ಲಪ್ಪ.ನನ್ನ ತಾಯಿ ನನಗಾಗಿ ಪಟ್ಟ ಪಾಡು ಸ್ವಲ್ಪವೇ. ಅವಳು ತೀರಿಕೊಂಡಾಗ ನನ್ನ ಅರ್ಧಜೀವ ಹೋಯ್ತು" ಅಂದ. ನನ್ನ ಶೋಕ ತೀವ್ರವಾಯಿತು". ಅವಳ ಕಾಯಿಲೆ ಇವತ್ತು ನಿನ್ನೆಯದಲ್ಲ ಸಾರ್. ನನ್ನನ್ನು ಹೆತ್ತಾಗ ಮನೇಲಿ ಕೆಲಸ ಮಾಡೋಕೆ ಯಾರೂ ಇರಲಿಲ್ಲವಂತೆ. ಹೆರಿಗೆಯಾದ ಸ್ವಲ್ಪ ಹೊತ್ತನಲ್ಲೇ ದನದ ಕೊಟ್ಟಿಗೆಯಿಂದ ಹಂಡಿಯ ಕೂಗು ಬರ್ತಿತ್ತಂತೆ. ಅದರ ಕರು ಬಿಟ್ಟುಕೊಳ್ಳೋಕೆ ನನ್ನ ತಾಯಿಯೇ ಆಗಬೇಕು. ಹೋಗಿ ಹಾಲು ಕರದೇ ಬಿಟ್ಟಳು ನನ್ನವ್ವ. ಹೀಗಾಗಿ ಬಂದದ್ದು ಕಾಯಿಲೆ. ಅದಕ್ಕೆ ಕಾರಣ ನಾನೇ ಅನ್ಸುತ್ತೆ." ಎಂದು ಭಾವನಾತ್ಮಕವಾಗಿ ತಮ್ಮ ತಮ್ಮ ತಾಯಿಯರ ವಿಚಾರಗಳನ್ನು,ಅವಳ ಮನೆಯಲ್ಲಿನ ಪ್ರತಿನಿಧಿಕರಣವನ್ನು ಹಂಚಿಕೊಳ್ಳುತ್ತಾರೆ. ಬಸವರಾಜನಿಗೆ ತನ್ನ ತಾಯಿಯ ಬಗ್ಗೆ ಆತ್ಮಾಭಿಮಾನ ಪ್ರೀತಿ ಇದ್ದರೂ ಅದನ್ನು ಮೀರಿದ ಸಿಟ್ಟು ಆಕ್ರೋಶದಿಂದ ಆಕೆಯೊಂದಿಗೆ ವರ್ತಿಸುತ್ತಿದ್ದನೆಂದು ಗಂಗಪ್ಪನ ಮೂಲಕ ತಿಳಿಯುತ್ತದೆ. ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಣಗಳಲ್ಲಿಯೇ

ದಿಟ್ಟ ಮನಸ್ಸಿನ ದೈತ್ಯಾಕಾರದ ನಿರ್ಲಜ್ಜೆ, ನಿರ್ಭೀತಿಯ ವ್ಯಕ್ತಿತ್ವ ರಂಗಯ್ಯನ ಹೆಂಡತಿಯದು. ರೂಮಿನ ಬಾಗಿಲು ಹಾಕಿಕೊಂಡು ಬಸವರಾಜನನ್ನು ವಿವಸ್ತ್ರನನ್ನಾಗಿಸಿ ತಾನೂ ನಗ್ನಳಾಗಿ ಬಸವರಾಜನಿಗೆ ಆತುಬೀಳುವ ಗುಣ ಅವಳದು. ಇಂಥ ವೇಳೆಯಲ್ಲಿ ಶಾಂತ ಬಂದು ಬಾಗಿಲು ತಟ್ಟುತ್ತಾಳೆ. ತಿಮಿಂಗಿಲಳ ಬಿಗಿಯಾದ ಹಿಡಿತವನ್ನು ತನ್ನ ಶಕ್ತಿಯನ್ನೆಲ್ಲಾ ಸೇರಿಸಿಕೊಂಡು, ಅವಳ ಕೈಗಳನ್ನು ಕಿತ್ತೆಸೆದು ಮೇಲೇಳುತ್ತಾನೆ. ಕೂಡಲೆ ಅಂಗಿ ಧರಿಸಿ ತನ್ನ ಪ್ರತಿಬಿಂಬ ಕಾಣುತ್ತಿದ್ದ ಕನ್ನಡಿಯನ್ನು ಚೂರಿಯಿಂದ ಹೊಡೆಯುತ್ತಾನೆ. ಹೀಗಾಗಿ ಶಾಂತಾ ಬಸವರಾಜನ ಬಿಕ್ಕಟ್ಟಿನ ಸ್ಥಿತಿಯ ಬಿಡುಗಡೆಯ ಹೆಣ್ಣಾಗಿ ಕೊನೆಗೆ ಬಸವರಾಜನ ವ್ಯಕ್ತಿತ್ವವನ್ನೇ ಬದಲಾಯಿಸುವ, ಎಲ್ಲದಕ್ಕೂ ಅಂಜಿ ಓಡುತ್ತಿದ್ದವನು, ಯಾರನ್ನೂ ಕಂಡರೂ ನಿಲ್ಲದವನು ಕೊನೆಗೆ ಯಾರಾದರಾಗಲಿ ಎಂಬ ನಿರ್ಧಾರದಿಂದ ನಿಂತು, ಎದುರಿಸುವ ಸಾಮರ್ಥ್ಯ ಶಾಂತಾಳಿಂದ ಬಸವರಾಜನಿಗೆ ಪ್ರಾಪ್ತವಾಗುತ್ತದೆ. ಹೀಗಾಗಿ 'ಬಿರುಕು' ಕಾದಂಬರಿಯಲ್ಲಿ ಚಿತ್ರಿತವಾಗಿರುವ ಮಹಿಳೆಯ ಪ್ರತಿನಿಧೀಕರಣ ಒಂದೆಡೆ ಗುಣಾತ್ಮಕವಾಗಿಯೂ ಮತ್ತೊಂದೆಡೆ ಋಣಾತ್ಮಕವಾಗಿಯೂ ಚಿತ್ರಿತವಾಗಿದೆ. ವಿಭಿನ್ನ ರೀತಿಯಲ್ಲಿ ಪ್ರತಿನಿಧಿಸಿ ಬದ ಲಾಗುತ್ತಿರುವ ಸಮಾಜಕ್ಕೆ ಹೊಂದಿಕೊಂಡು ಮುನ್ನುಗ್ಗುತ್ತಿರುವ ಅಕ್ಷರಸ್ಥ,ಧೈರ್ಯ ಮನೋಭಾವದ ಸ್ತ್ರೀ ಪಾತ್ರಗಳೇ ಕಾದಂಬರಿಯಲ್ಲಿ ಕೇಂದ್ರೀಕರಣಗೊಂಡಿದೆ.ನೈತಿಕತೆಯನ್ನು ಭಂಜಿಸುವ ವ್ಯಕ್ತಿಕೇಂದ್ರಿತ ನೆಲೆಗಳಲ್ಲಿ ಇಲ್ಲಿಯ ಶಾಂತ,ತಿಮಿಂಗಿಲ,ಸುವರ್ಣ ಪಾತ್ರಗಳು ಬಂದಿವೆ.

**ಮುಸ್ಸಂಜೆಯ ಕಥಾಪ್ರಸಂಗ**

ರಂಗವ್ವ ಎಂಬ ವಿಧವೆಯೊಬ್ಬಳ ಸಂಸಾರದ ವರ್ಣನೆಯಿಂದ ಕಾದಂಬರಿ ಆರಂಭವಾಗುತ್ತದೆ. ಇಲ್ಲಿ ರಂಗವ್ವನ ಗಟ್ಟಿತನ, ಸಮಸ್ಯೆಗಳನ್ನು ಎದುರಿಸುವ,ಎಂತಹುದೇ ಸಂದಿಗ್ಧ ಪರಿಸ್ಥಿತಿಯನ್ನು ಸಮತೋಲನಗೊಳಿಸಿಕೊಂಡು ಮನಸ್ಸನ್ನು ಚಂಚಲಗೊಳಿಸದೇ, ಧೈರ್ಯದಿಂದ, ದುಃಖಗಳಿಗೆ ಕುಗ್ಗದೆ,ಮೌನವಾಗಿ ಜೀವನವನ್ನು ಎದುರಿಸುವ ಮಹಿಳೆಯಾಗಿ ಪ್ರತಿನಿಧಿಸಿದ್ದಾಳೆ. ತನ್ನ ಗಂಡನ ಸಾವು,ಊರಿಗೆ ಪ್ಲೇಗು ಬಂದಾಗ, ಎಮ್ಮೆಗಳು ಹುಲಿಯ ಬಾಯಿಗೆ ತುತ್ತಾದಾಗಲೂ ಹಿಂಜರಿಯದೇ ತನ್ನ ಬಡ್ಡಿ ವ್ಯವಹಾರವನ್ನು ಮಾಡುತ್ತಾ 'ಆಣೆ ಬಡ್ಡಿ ರಂಗವ್ವ' ಎನಿಸಿಕೊಂಡಿದ್ದಳು. ಇದರ ಮಧ್ಯೆ ರಂಗವ್ವನಿಗೆ ಮಗಳು ಸಾವಂತ್ರಿಯ ಮದುವೆ ಯೋಚನೆ ಕಾಡಹತ್ತುತ್ತದೆ. ರಂಗವ್ವನ ಜಿಪುಣತನ ಅವಳು ಒಂದು ಹಾಡಿಗೆ ನಾಲ್ಕಾಣೆಯಂತೆ ವಸೂಲಿ ಮಾಡಿ ಮಗಳು ಸಾವಂತ್ರಿಯ ಬಳಿ ಹಾಡು ಹೇಳಿಸುತ್ತಿದ್ದಳು.ದುರಾಸೆಯ ರಂಗವ್ವ ದುಡ್ಡಿಗಾಗಿ ಎಂದೂ ನಂಬದ ಬ್ಯಾಡರ ಮಂಜನನ್ನು ನಂಬಿ ಅವನಿಗಾಗಿ ಸಿನಿಮಾ ಹಾಡಗಳನ್ನು ಸಾವಂತ್ರಿಯಿಂದ ಹಾಡಿಸುತ್ತಾಳೆ. ಇಲ್ಲಿ ಅವಳ ಹಣದ ವ್ಯಾಮೋಹ,ಅದಕ್ಕಾಗಿ ಎಂತಹುದಕ್ಕಾದರೂ ಸಿದ್ಧ ಎನ್ನುವ ಭಾವನೆ ಕಾಣುತ್ತದೆ. ಅವಳ ಆಸೆಬುರುಕುತನ, ಬದುಕಿನ ಹಂಬಲ ಯಾವ ರೀತಿ ಅಂತರ್ಗತವಾಗಿತ್ತೆಂದರೆ ತಾನೂ ಹಾಡು ಹೇಳಲು ಕಲಿತಿದ್ದರೆ ಇನ್ನೂ ಹೆಚ್ಚು ವಸೂಲಿಯಾಗುತ್ತಿತ್ತು ಎಂದು ತನ್ನನ್ನು ಕೆಲವೊಮ್ಮೆ ಬೈದುಕೊಳ್ಳುತ್ತಾಳೆ. ಪ್ರತಿಯೊಂದು ಸನ್ನಿವೇಶದಲ್ಲಿಯೂ ಬದುಕಿಗಾಗಿ ಹವಣಿಸುತ್ತಾಳೆ ರಂಗವ್ವ.

ವೈಯಕ್ತಿಕವಾಗಿ ಸಾವಂತ್ರಿಯ ತಾಯಿಯಾಗಿ ರಂಗವ್ವ ಇಲ್ಲಿ ಪ್ರತಿನಿಧಿತವಾಗುತ್ತಾಳೆ. ಮಗಳ ಮೇಲಿನ ಕಾಳಜಿ, ವ್ಯಾಮೋಹ ವ್ಯಕ್ತವಾಗುವುದು ಸಾವಂತ್ರಿ ಬಚ್ಚಿಟ್ಟಿದ್ದ ಕಾಗದವನ್ನು ತನ್ನ ಸೀರೆಯ ಸೆರಗಿಗೆ ಕಟ್ಟಿಕೊಂಡು ಅದನ್ನು ಕರಿಯನಿಗೆ ಕೊಟ್ಟು ಓದಿಸುವಲ್ಲಿ ಕಂಡುಬರುತ್ತದೆ. ಮಗಳನ್ನು ನೋಡಲು ಮತ್ತೆ

ಮಂಜ ಬಂದಾಗ ಅವನ ದೃಷ್ಟಿಯಿಂದ ಅವಳನ್ನು ಕಾಪಾಡಲು ಪ್ರಯತ್ನಿಸುವಲ್ಲಿ ಮನ ಬಂದಂತೆ ಮಗಳನ್ನು ತಣಿಸಿ, ಬೈಯುತ್ತಾಳೆ ಇಲ್ಲಿ ಜವಾಬ್ದಾರಿಯನ್ನು ಮೆರೆಯುತ್ತಾಳೆ. ಸಾವಂತ್ರಿಯ ಪ್ರೇಮಾಂಕುರವನ್ನು ತಡೆಯಲು ಸಾಧ್ಯವಾಗದೆ ಅವಳು ಮಂಜನ ಜೊತೆ ಸಿನಿಮಾಕ್ಕೆ ಹೋದಾಗ ಊರಿನವರು ದಂಡ ಹಾಕುವುದಾಗಿ ಹೇಳಿದಾಗ ದುಡ್ಡು ಸಿಗುವುದಕ್ಕಾಗಿ ಸಮಾಧಾನಪಟ್ಟಿಕೊಳ್ಳುತ್ತಾಳೆ. ಹಣದ ಅಮಲು ಅತರೇಕಕ್ಕೆ ಹೋಗಿರುತ್ತದೆ. ಕಾದಂಬರಿಯಲ್ಲಿ ರಂಗವ್ವ ಮತ್ತು ಸಾವಂತ್ರಿಯವ್ಯಯಕ್ತಿಕ ಬದುಕಿನ ದಿಗ್ವಿಜಯವನ್ನು ಸಾಮಾಕರಿಸಲಾಗಿದೆ. ಕಾಮ, ಪ್ರೇಮ, ದ್ವೇಷ, ಅಸೂಯೆ, ಜೂಜುಗಾರಿಕೆ, ಧರ್ಮ, ಮತ, ಜಾತಿ, ಮೊದಲಾದ ಹಲವು ವಿನ್ಯಾಸಗಳನ್ನು ಅನಾವರಣಗೊಳಿಸುವ ಈ ಕಾದಂಬರಿ ಮಹಿಳಾ ಪಾತ್ರಗಳನ್ನು ಸಮಯ–ಸನ್ನಿವೇಶಕ್ಕೆ ತಕ್ಕಂತೆ ಪ್ರತಿನಿಧಿಸುವಲ್ಲಿ ಯಶಸ್ವಿಯಾಗಿದೆ. ಇಲ್ಲಿ ಸತ್ವಯುತವಾದ ಮಹಿಳಾ ಪಾತ್ರಗಳು, ಭೋಗ ಸಂಸ್ಕೃತಿಗೆ ಒಗ್ಗಿದ ಮಹಿಳಾ ಪಾತ್ರಗಳನ್ನು ಕಾಣಬಹುದಾಗಿದೆ. ಭರಮಣ್ಣನು ರುದ್ರಿಯಲ್ಲಿ ಸಿಗದ ಸುಖಕ್ಕಾಗಿ ರಾಮಿಯನ್ನು ಮದುವೆಯಾದದ್ದು. ಆದರೆ ರಾಮಿ ಹೆಸರಿಗೆ ತಕ್ಕಂತೆ ಹರಾಮಿ. ಅವಳದೋ ತಣಿಸಲಾಗದ ಕಾಮ. ಇಲ್ಲಿನ ಸ್ತ್ರೀಲೋಕವು ಪುರುಷ ಪ್ರಪಂಚದ ಎಲ್ಲ ಬಗೆಯ ಚಟುವಟಿಕೆಗಳನ್ನು ನಿಯಂತ್ರಿಸಿಬಿಡುವುದು. ರಂಗವ್ವ ಮತ್ತು ಸಾವಂತ್ರಿ ಬದುಕಿನಲ್ಲಿ ಎಲ್ಲ ಬಗೆಯ ಒತ್ತಡ ಹಾಗೂ ಸಂಕಷ್ಟಗಳನ್ನು ಹಾದು ಮತ್ತೊಬ್ಬರ ಕಷ್ಟ ನೋವುಗಳಿಗೆ ಸ್ಪಂದಿಸುತ್ತಾ ಅಸ್ಪಷ್ಟ ಭವಿಷ್ಯವನ್ನು ಎದುರುಗೊಳ್ಳುಲು ಸಜ್ಜಾಗಿ ಇಡೀ ಹಳ್ಳಿಯ ವೈರವನ್ನು ಎದುರಿಸಿ ಬ್ಯಾಡರ ಮಂಜನನ್ನು ತಮ್ಮ ಕುಟುಂಬಕ್ಕೆ ಸ್ವೀಕರಿಸಿ ಗಟ್ಟಿ ವ್ಯಕ್ತಿತ್ವಕ್ಕೆ ಜೀವಪರ ಮೌಲ್ಯಗಳಿಗೆ ಸಾಕ್ಷಿಯಾಗುತ್ತಾರೆ.ರಂಗವ್ವನ ಬದುಕನ್ನು ಹಾಳು ಮಾಡಲು ಪ್ರಯತ್ನಸಿದ ಭರ್ಮಣ್ಣ ತನ್ನ ಕಿರಿಯ ಹೆಂಡತಿಯ ಹರಾಮಿ ತನದಿಂದ ದಿಗ್ಭ್ರಾಂತನಾಗುತ್ತಾನೆ.

ಸಾವಂತ್ರಿಯ ಮೇಲೆಯೇ ಎಲ್ಲರ ಕಣ್ಣು, ಇವಳಿಗೋ ಮಂಜನ ಮೇಲೆ ವಿಪರೀತ ಪ್ರೀತಿ. ಬೂಸಿ ಬಸ್ಯ, ರಾಚ, ಶಿವನಂಜ, ಇವರೆಲ್ಲರೂ ಸಾವಂತ್ರಿಯನ್ನು ಪಡೆದುಕೊಳ್ಳಲು ನಡೆಸುವ ನಾಟಕ ಹಲವು ಬಗೆಯದು. ಶ್ರೇಷ್ಠಿಯವರ ಮಗಳು ದೇವೀರಿಯು ಹೊಲೆಯರ ದುರುಗನೊಂದಿಗೆ ಓಡಿಹೋದದ್ದು ಮಾತ್ರ ಅವರ ಬಾಳಿನಲ್ಲಿ ಮರೆಯದ ನೋವಾಗಿ ಉಳಿದುಬಿಡುತ್ತದೆ. ಸಾವಂತ್ರಿ ಮತ್ತು ಶಿವಿಯರನ್ನು ಮುಖಾಮುಖಿಯಾಗಿಸುವ ಸಮವಾರಿಗೆಯ ಭಿನ್ನ ಸಂಸ್ಕೃತಿಯ ಪ್ರತಿನಿಧಿಗಳಾಗಿರುವ ಇವರನ್ನು ಮತ್ತೊಂದು ಆಯಾಮದಲ್ಲಿ ಲಂಕೇಶ್ ಅವರು ಗುರುತಿಸಿದ್ದಾರೆ. ಆಧುನಿಕ ಶಿಕ್ಷಣಕ್ಕೆ ಒಗ್ಗಿದ ಶಿವಿ ಒಬ್ಬಂಟಿಯಾಗಿ ಅಧೀರಳಾಗಿ, ಪರಾವಲಂಬಿಯಾಗಿ ವ್ಯವಸ್ಥೆಗೆ ತಲೆಬಾಗಿ ಬದುಕಿನ ಸುಖಗಳನ್ನು ಪುಸ್ತಕದಲ್ಲಿ ಅರಸುವ ಮನೋಭಾವದವಳಾದರೆ, ಇದಕ್ಕೆ ವಿರುದ್ಧವಾಗಿ ಸಾವಂತ್ರಿಯಲ್ಲಿ ಉಡಿಮೆಯ ಗುಣ, ಸ್ವಾವಲಂಬನೆ,ಲವಲವಿಕೆ,ಸಮಾಜದ ಕೃತಿಮತೆ ಅರಿತು ತನ್ನ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಂಡು ಮತ್ತೊಬ್ಬರ ಕಷ್ಟಕ್ಕೆ ಮಿಡಿಯುವ ಧನಾತ್ಮಕ ಮನಸ್ಥಿತಿಯ ಪಾತ್ರಗವಾಗಿ ಕಾಣಿಸುತ್ತಾಳೆ. ಅತ್ಯಂತ ಧೈರ್ಯಸ್ಥಳಾದ ಸಾವಂತ್ರಿಗೆ ಮಾತ್ರವಲ್ಲ, ಅತ್ಯಂತ ದುರ್ಬಲ ವ್ಯಕ್ತಿತ್ವವನ್ನು ಹೊಂದಿರುವ ಶಿವಿಗೂ ಪ್ರೇಮಸಂಬಂಧಗಳು ಸುಲಭವಾಗುವುದಿಲ್ಲ. ಶಿವಿ ಮತ್ತು ಕರಿಯರ ಸಂಬಂಧವು ಕಾದಂಬರಿಯಲ್ಲಿ ಸ್ಪಷ್ಟವೇ ಆಗುವುದಿಲ್ಲ. ಇದು ಲೇಖಕರ ತಂತ್ರವೋ ಅಥವಾಕಾದಂಬರಿಯ ದೋಷವೋ ತಿಳಿದುಬರುವುದಿಲ್ಲ. ಮಾನವೀಯ ಸತ್ವವನ್ನೂ ಕಳೆದುಕೊಂಡು ಕ್ರೂರವಾಗುವ ಸಮಾಜವು ನಮಗೆ ತಿಳಿದು ಬರುವುದು ಶಿವಿಯ ಸಾವಿನಿಂದಲೇ. ಇವಳ ಸಾವು ಬರುವ 'ಸಾವಿನ ಸುತ್ತ ಬದುಕು'ಎಂಬ ಅಧ್ಯಾಯವು ಇಡೀ ಕಾದಂಬರಿಯಲ್ಲೇ ಪ್ರಬುದ್ಧವಾದ

ಭಾಗವಾಗಿದೆ.ಇನ್ನುಳಿದಂತೆ ಲೇಖಕರು ರಾಮಿಯ ಒಳಮನಸ್ಸಿನ ಕುದಿತಗಳನ್ನು ಬರೆಯದೇ ಆಕೆಯ ಸ್ನಾನದ ಪ್ರಕರಣವನ್ನು ಅತ್ಯಂತ ರಂಜನೀಯವಾಗಿ, ಅಶ್ಲೀಲವಾಗಿ ನಿರೂಪಿಸಿದ್ದಾರೆ. ಮಮ್ತಾಜಳು ತನ್ನ ಗಂಡನ ಜೊತೆ ಕಂಬಳ್ಳಿಗೆ ಬರುವುದರ ಉದ್ದೇಶ ಕೂಡ ಅಸ್ಪಷ್ಟವಾಗಿದೆ. ಹನುಮಕ್ಕನ ಹನುಮಕ್ಕನ ಜಗಳಗಂಟಿ ಸ್ವಭಾವ ಅದರ ಹಿಂದಿನ ಆರ್ಥಿಕತೆ ಮತ್ತು ಮಗನ ಬಗೆಗಿನ ಕಾಳಜಿಯನ್ನು ಮನಸ್ಸು ಮುಟ್ಟುವಂತೆ ವಿವರಿಸಿದ್ದಾರೆ.

ಒಟ್ಟಾರೆಯಾಗಿ 'ಮುಸ್ಸಂಜೆಯ ಕಥಾಪ್ರಸಂಗ'ದ ಸ್ತ್ರೀ ಪಾತ್ರಗಳು ಬದುಕಿನ ಅದಮ್ಯ ಛಲದ,ಸ್ತ್ರೀ ಶಕ್ತಿ ಬಲದ ಮತ್ತು ಸಂಪೂರ್ಣ ಸ್ವಾತಂತ್ರದ, ಸ್ವಂತ ಬದುಕನ್ನು ಕಂಡುಕೊಳ್ಳುವ ಪ್ರಸಂಗಗಳಲ್ಲಿ ಪ್ರತಿನಿಧಿಸುವಲ್ಲಿ ಯಶಸ್ವಿಯಾಗಿದೆ. ಎಂಬುದು ಕಾದಂಬರಿಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಗ್ರಾಮೀಣ ನೆಲೆಗಟ್ಟಿನಲ್ಲಿ ಸ್ತ್ರೀ ಪಾತ್ರಗಳನ್ನು ಪ್ರತಿನಿಧಿಸಿ ಬರೆಯುವಲ್ಲಿ ಲಂಕೇಶರು ಸಫಲರಾಗಿದ್ದಾರೆ.

**ಉಪಸಂಹಾರ**

ಪಿ. ಲಂಕೇಶರು ಈ ಕಾದಂಬರಿಗಳ ಮೂಲಕ ಹೊಸದಾದ ಲೋಕವನ್ನೇ ನಮ್ಮ ಮುಂದಿಡುತ್ತಾರೆ. ಮಾನವ ಸಹಜ ಗುಣಗಳಾದಂತಹ ಅಸಹಾಯಕತೆ, ಏಕಾಂಗಿತನ, ಕನಸು, ಭ್ರಮೆ, ಪ್ರೀತಿ, ಜಾತಿ, ರಾಜಕೀಯ, ಲೈಂಗಿಕತೆ, ಹಣ, ಸಿನಿಮಾ, ಮುಂತಾದವುಗಳನ್ನು ಮೀರಿದ ಮನುಷ್ಯ ಪ್ರೀತಿ ಲಂಕೇಶರ ಬರವಣಿಗೆಯಲ್ಲಿ ಪ್ರಮುಖವಾಗಿ ಕಾಣಬಹುದಾಗಿದೆ. ಮಾನವರನ್ನು ಈ ರೀತಿಯ ಗುಣಗಳು ರಾಕ್ಷಸರನ್ನಾಗಿಸಿಬಿಡುತ್ತವೆ. ಇಲ್ಲಿ ಬರುವಂತಹ ಮಹಿಳಾ ಪಾತ್ರಗಳು ಅವರ ನೋವು, ಜೀವನ ನಿರ್ವಹಣೆಗಾಗಿನ ತೊಳಲಾಟ ಪ್ರತಿಯೊಂದು ಮನಕಲಕುವ ದೃಶ್ಯಗಳಾಗಿ ನಿಲ್ಲುತ್ತವೆ. ಮಹಿಳಾ ಪಾತ್ರ ಚಿತ್ರಣದಲ್ಲಿ ಬಹುಮುಖಿ ಪ್ರತಿಭೆಯನ್ನು ಲಂಕೇಶರು ಮೆರೆದಿದ್ದಾರೆ. ಸಮಕಾಲೀನ ಸಮಾಜ ಅವರ ಕೃತಿಗಳ ಪ್ರಧಾನ ಆಶಯವಾಗಿದೆ. ಮಹಿಳೆಯರ ಮೇಲಾಗುವ ಶೋಷಣೆ, ದೌರ್ಜನ್ಯ, ಅವಳು ಜೀವನ ಸಾಗಿಸುವುದೇ ಪ್ರಯಾಸವಾಗುತ್ತದೆ.

**ಪರಾಮರ್ಶನ/ ಆಧಾರ ಗ್ರಂಥಗಳು**


- ಅನಂತಮೂರ್ತಿ ಯು. ಆರ್. ಪ್ರಜ್ಞೆ ಮತ್ತು ಪರಿಸರ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಆಮೂರ ಜಿ.ಎಸ್. ಕನ್ನಡ ಕಥನ ಸಾಹಿತ್ಯ:ಸಣ್ಣ ಕಥೆ. ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
- ಕೀರ್ತಿನಾಥ ಕುರ್ತಕೋಟಿ. ಯುಗಧರ್ಮ ಮತ್ತು ಸಾಹಿತ್ಯ ದರ್ಶನ. ಮನೋಹರ ಗ್ರಂಥಮಾಲೆ ಪ್ರಕಾಶನ, ಧಾರವಾಡ.
- ಕೋದಂಡರಾಮ ಎನ್.ಕೆ. (1996.). ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ. ಗಾಯಿತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು.
- ಲಂಕೇಶ್ ಪಿ. (2007). ಅಕ್ಕ. ಲಂಕೇಶ್ ಪ್ರಕಾಶನ, ಬೆಂಗಳೂರು,
- ಲಂಕೇಶ್ ಪಿ. (2009). ಬಿರುಕು. ಲಂಕೇಶ್ ಪ್ರಕಾಶನ, ಬೆಂಗಳೂರು
- ಲಂಕೇಶ್ ಪಿ. (2018). ಮುಸ್ಸಂಜೆಯ ಕಥಾ ಪ್ರಸಂಗ. ಲಂಕೇಶ್ ಪ್ರಕಾಶನ. ಬೆಂಗಳೂರು.